# IN THE COURT OF THE ADDL. SENIOR CIVIL JUDGE & JMFC., GUBBI

# **OS -52/2020**

Witness present and duly sworn on : 09-06-2026

Cross Examination: by Counsel for Plaintiff:

ವಾದಿ ರಾಮಣ್ಣ ನನ್ನ ತಾಯಿ ಶಿವಮ್ಮ ರವರ ತಮ್ಮ . ನನ್ನ ತಾತನ ಹೆಸರು ಸಿದ್ದಪ್ಪ. ದಾವೆಯನ್ನು ಎಷ್ಟು ಆಸ್ತಿಗಳಿಗೆ ಸಲ್ಲಿಸಿದ್ದಾರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ರಾಮಣ್ಣ ನವರ ತಂದೆ ಸಿದ್ದಪ್ಪರವರಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಸಿದ್ದಪ್ಪನವರ ಜೀವಿತಾವಧಿಯಲ್ಲಿ ವಿಬಾಗಿ ಆಗಿತ್ತು . ವಿಬಾಗ ಆಗಿತ್ತು ಎಂದು ತೋರಿಸಲು ದಾಖಲೆಗಳು ಇರವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ವಿಬಾಗದ ಮಾಹಿತಿ ಹೇಳಿರುತ್ತಾರೆ. ದಾವಾ ಅಸ್ತಿಗಳ ಪಹಣಿಗಳನ್ನು ನಾನು ನೋಡಿಲ್ಲ. ಸರ್ವೆ ನಂ 4/3 ಆಸ್ತಿಯ ಪಹಣಿ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಗೌರಮ್ಮ ರವರು ವಾದಿ ರಾಮಣ್ಣ ನವರ ಅತ್ತಿಗೆ. ವಾದಿಯು ಸರ್ವೆ ನಂ 4/3 ಜಮೀನಿನ ಸ್ವಾಧೀನವನ್ನು ವಿಬಾಗದ ಮೂಲಕ ಪಡೆದಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದು ಯಾವುದೇ ವಿಬಾಗ ಆಗಿಲ್ಲ ಎಂದರೆ ಸರಿಯಲ್ಲ. ವಿಬಾಗದ ಬಗ್ಗೆ ನನಗೆ ವ್ಯಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ . ಯೋಗಿಶ್ ರವರು ಸಿದ್ದಪ್ಪರವರ ಮೊಮ್ಮಗ. ಯೊಗೀಶ್ ರವರಿಗೆ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳಿದ್ದು ಅವರ ತಂದೆ ದಾನ ಪತ್ರ ಸೃಷ್ಟಿಸಿದದ್ದಾರೆ ಎಂದರೆ ಸರಿಯಲ್ಲ. ಸಶವೆ ನಂ 1/2 ಜಮೀನನ್ನು ಒಟ್ಟು ಕುಟುಂಬದ ಜಮೀನಿನ ಆದಾಯದಿಂದ ಖರೀದಿ ಮಾಡಿದಾರೆ ಎಂದರೆ ವಿಬಾಗ ಮಾಡಿದ ನಂತರ ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಗಳಲ್ಲಿ ವಿಬಾಗ ಆಗಿಲ್ಲ ಅದರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಮೌಖಿಕ ವಾಗಿ ವಿಬಾಗ ಆಗಿದೆ. ನಾನು ತುಮಕೂರು ತಾಲೂಕಿನ ಅದಲಾಪುರ ನಿವಾಸಿ. ಅದಲಾಪುರ ಗ್ರಾಮದ ಅಸ್ತಿಗಳನ್ನು ನನ್ನ ತಾಯಿಯು ಖರೀದಿ ಮಾಡಿರುತ್ತಾರೆ. ಸಿದ್ದರಾಮಣ್ಣರವರಿಗೆ ನನ್ನ ತಾಯಿಯ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಲು ಅವರಿಗೆ ಸ್ವಂತ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ದನ, ಹಸು ವ್ಯಪಾರ ಮಾಡುತ್ತಿದ್ದರು. ಸದರಿ ವ್ಯಪಾರ ದ ಬಗ್ಗೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ

ಹೇಳಿರುವುದಿಲ್ಲ. ಸದರಿ ವಿಚಾರವನ್ನು ಈ ದಾವೆಯ ಸಲುವಾಗಿ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದರಾಮಣ್ಣ ನವರ ಆಸ್ತಿ ಖರೀದಿಯ ಹಣವನ್ನು ಒಟ್ಟು ಕುಟುಂಬದ ಆದಾಯದಿಂದ ನೀಡಿದ್ದರು ಎಂದರೆ ಸರಿಯಲ್ಲ.ಸಿದ್ದರಾಮಣ್ಣನವರು ನನ್ನ ತಾಯಿಯ ಹೆಸರಿನಲ್ಲಿ ಆಸ್ತಿಯನ್ನು ಖರೀದಿ ಮಾಡುವ ಕಾರಣ ಅದು ಒಟ್ಟು ಕುಟುಬದ ಆಸ್ತಿ ಮತ್ತು ವಾದಿಗೆ ಅದರಲ್ಲಿ ಹಕ್ಕು ಇದೆ ಎಂದರೆ ವಿಬಾಗದ ನಂತರ ಆಸ್ತಿಯನ್ನು ಖರೀದಿ ಮಾಡಿರುವ ವಾದಿಗೆ ಹಕ್ಕು ಇರುವುದಿಲ್ಲ.

ನಾನು ಮತ್ತು ವಾದಿ ಬಹಳ ವರ್ಷಗಳಿಂದ ಅನ್ಯೂನ್ಯವಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಪಾಲು ಕೊಡಬಾರದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವ ವಿಚಾರಗಳು ಗೊತ್ತಿರದೇ ಇದ್ದರೂ ಸಹ ವಾದಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi